# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 546
2. ಸದಸ್ಯರ ಹೆಸರು : ಶ್ರೀ ಎಸ್.ರವಿ
3. ಉತ್ತರಿಸುವ ದಿನಾಂಕ : 11.07.2023
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಹೊರವಲಯದಲ್ಲಿರುವ ದಾಸನಪುರ ಉಪ ಮಾರುಕಟ್ಟೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು. ಉಪ ಮಾರುಕಟ್ಟೆ ನಿರ್ಮಾಣದ ಉದ್ದೇಶಗಳೇನು? ಇದರ ವಿಸ್ತೀರ್ಣವೆಷ್ಟು; ಈ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿವೆಯೇ; (ಸಂಪೂರ್ಣ ವಿವರ ನೀಡುವುದು) | ದಾಸನಪುರ ಉಪ ಮಾರುಕಟ್ಟೆಯನ್ನು ಸ್ಥಾಪಿಸಲು ಉದ್ದೇಶಿಸಿ ದಿನಾಂಕ:17-04-2008 ರಲ್ಲಿ 67.25 ಎಕರೆ ಸರ್ಕಾರಿ ಜಮೀನನ್ನು ಪಡೆದುಕೊಂಡಿದ್ದು, ದಿನಾಂಕ:07.10.2009 ರಂದು ದಾಸನಪುರ ಉಪ ಮಾರುಕಟ್ಟೆ ಎಂದು ಘೋಷಿಸಲಾಗಿದೆ. ನಂತರ ಹಂತಹಂತವಾಗಿ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗಿದೆ.<br><br>ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಈರುಳ್ಳಿ, ಆಲೂಗಡ್ಡೆಯನ್ನು ಮಾರಾಟಕ್ಕೆಂದು ತರುವ ರೈತರು ದಲ್ಲಾಲಿ/ವರ್ತಕರ ಅಂಗಡಿಗಳಿಗೆ ತಲುಪಲು ಹಾಗೂ ಅದೇ ರೀತಿ ವಹಿವಾಟು ಪೂರ್ಣಗೊಳ್ಳಲು ಅತಿಯಾದ ದಟ್ಟಣೆಯಿಂದ ತೊಂದರೆಯಾಗುತ್ತಿದ್ದುದ್ದನ್ನು ತಪ್ಪಿಸುವ ಉದ್ದೇಶದಿಂದ ದಾಸನಪುರ ಉಪ ಮಾರುಕಟ್ಟೆಯನ್ನು ನಿರ್ಮಿಸಲಾಗಿರುತ್ತದೆ.<br><br>ದಾಸನಪುರ ಉಪ ಮಾರುಕಟ್ಟೆಯ ಒಟ್ಟು ವಿಸ್ತೀರ್ಣ 67.25 ಎಕರೆ ಇರುತ್ತದೆ. ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಇ ಬ್ಲಾಕ್‌ನಲ್ಲಿ ಪ್ರತಿನಿತ್ಯ ತರಕಾರಿ ವಹಿವಾಟು ನಡೆಯುತ್ತಿದೆ.<br><br>ಎ ಮತ್ತು ಬಿ ಬ್ಲಾಕ್‌ನಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳ ವಹಿವಾಟಿಗಾಗಿ ಪೇಟೆಕಾರ್ಯಕರ್ತರಿಗೆ ಮಳಿಗೆಗಳನ್ನು ಹಂಚಿಕೆ ಮಾಡಿದ್ದು, ಸ್ವಲ್ಪ ಪ್ರಮಾಣದಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳ ವಹಿವಾಟು ನಡೆಯುತ್ತಿದೆ. |
| ಆ | ಈ ಉಪ ಮಾರುಕಟ್ಟೆಯಲ್ಲಿ ನಿರ್ಮಿಸಿರುವ ಮೂಲ ಸೌಕರ್ಯಗಳೇನು; ಎಷ್ಟು ಅಂಗಡಿ, ಮಳಿಗೆ/ಗೋದಾಮುಗಳನ್ನು ನಿರ್ಮಿಸಲಾಗಿದೆ; ಇದಕ್ಕಾಗಿ ಖರ್ಚಾಗಿರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು) | ಉಪ ಮಾರುಕಟ್ಟೆಯಲ್ಲಿ ನಿರ್ಮಿಸಿರುವ ಮೂಲ ಸೌಕರ್ಯಗಳು ಕೆಳಗಿನಂತಿವೆ.<br>**ಎ ಮತ್ತು ಬಿ ಬ್ಲಾಕ್‌ಗಳಲ್ಲಿ**<br>• 05 ಶುದ್ಧ ಕುಡಿಯುವ ನೀರಿನ ಘಟಕಗಳು<br>• 02 ಸಾರ್ವಜನಿಕ ಶೌಚಾಲಯಗಳು<br>• 04 ಯೂರಿನಲ್ ಬ್ಲಾಕ್‌ಗಳು<br>• 1.00 ಲಕ್ಷ ಲೀಟರ್ ನೀರು ಸಂಗ್ರಹಣೆ ಸಾಮರ್ಥ್ಯದ ಸಂಪ್<br>• 02 ಎಸ್.ಟಿ.ಪಿ. ಘಟಕಗಳು<br>• 01 ಘನತ್ಯಾಜ್ಯ ನಿರ್ವಹಣಾ ಘಟಕ<br>• ವಿದ್ಯುತ್ ಸೌಲಭ್ಯ<br>• ಓವರ್ ಹೆಡ್ ಟ್ಯಾಂಕ್<br>• 04 ಕೊಳವೆ ಬಾವಿ<br>• ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿಗಳನ್ನು ಹೊಂದಿರುತ್ತದೆ.<br>• 60 ಮೆಟ್ರಿಕ್ ಟನ್ ಸಾಮರ್ಥ್ಯದ 02 ವೇಬ್ರಿಡ್ಜ್<br>• 01 ಉಪಹಾರ ಗೃಹ<br>• 04 ತನಿಖಾ ಠಾಣೆಗಳು<br>• 12 ಮುಚ್ಚು ಹರಾಜು ಕಟ್ಟೆಗಳು |

**ಡಿ-ಬ್ಲಾಕ್‌ನಲ್ಲಿ**

- ಆಡಳಿತ ಕಛೇರಿ
- 02 ಬ್ಯಾಂಕ್ ಕಟ್ಟಡ
- ಅಂಚೆ ಕಛೇರಿ
- ಪೊಲೀಸ್ ಸ್ಟೇಷನ್
- ವಿದ್ಯುತ್ ಸೌಲಭ್ಯ
- 02 ಕೊಳವೆ ಬಾವಿ
- ರೈತಭವನ

**ಸಿ-ಬ್ಲಾಕ್‌ನಲ್ಲಿ**

- 04 ಶುದ್ಧ ಕುಡಿಯುವ ನೀರಿನ ಘಟಕ
- 04 ಶೌಚಾಲಯ
- 01 ಎಸ್.ಟಿ.ಪಿ. ಘಟಕ
- ವಿದ್ಯುತ್ ಸೌಲಭ್ಯ
- 03 ಕೊಳವೆ ಬಾವಿ
- 01 ಕ್ಯಾಂಟೀನ್
- ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆಗಳು ಮತ್ತು ಕಾಂಕ್ರೀಟ್ ಚರಂಡಿಗಳನ್ನು ಹೊಂದಿರುತ್ತದೆ.

**ಇ-ಬ್ಲಾಕ್‌ನಲ್ಲಿ**

- 02 ಶುದ್ಧ ಕುಡಿಯುವ ನೀರಿನ ಘಟಕಗಳು
- 05 ಸಾರ್ವಜನಿಕ ಶೌಚಾಲಯ
- 01 ಎಸ್.ಟಿ.ಪಿ.ಘಟಕ
- 05 ಯೂರಿನಲ್ಸ್
- 1.00 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಸಂಪ್
- 03 ಕೊಳವೆ ಬಾವಿ
- ಓವರ್ ಹೆಡ್ ಟ್ಯಾಂಕ್
- 02 ಚೆಕ್‌ಪೋಸ್ಟ್
- ಸುಸಜ್ಜಿತ ವಿಶಾಲವಾದ ಕಾಂಕ್ರೀಟ್ ರಸ್ತೆಗಳು ಮತ್ತು ಕಾಂಕ್ರೀಟ್ ಚರಂಡಿಗಳನ್ನು ಹೊಂದಿರುತ್ತದೆ.

ಪ್ರಸ್ತುತದವರೆಗೆ ಒಟ್ಟು 772 ಮಳಿಗೆ/ಅಂಗಡಿ-ವ-ಗೋದಾಮುಗಳನ್ನು ನಿರ್ಮಿಸಲಾಗಿದೆ.

ಜಮೀನು ಖರೀದಿ ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಇದುವರೆವಿಗೂ **ಒಟ್ಟಾರೆ ರೂ.306.50ಕೋಟಿ** ಮೊತ್ತವನ್ನು ವೆಚ್ಚ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿದೆ.

| ವಿವಿಧ ಯೋಜನೆಗಳಿಂದ ಬಂದಿರುವ ಅನುದಾನ (ರೂ.ಕೋಟಿಗಳಲ್ಲಿ) | ಸಮಿತಿ ನಿಧಿಯಿಂದ ಮಾಡಿರುವ ಖರ್ಚು (ರೂ.ಕೋಟಿಗಳಲ್ಲಿ) |
|---|---|
| 54.78 | 251.72 |

| | | |
|---|---|---|
| ಇ | ಎಷ್ಟು ಅಂಗಡಿ ಮಳಿಗೆ/ ಗೋದಾಮುಗಳನ್ನು ಹಂಚಿಕೆ ಮಾಡಲಾಗಿದೆ. ಎಷ್ಟು ಖಾಲಿ ಉಳಿದಿವೆ; ಈ ಮಾರುಕಟ್ಟೆಯಲ್ಲಿ ಯಾವ ಯಾವ ಪದಾರ್ಥಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. (ಸಂಪೂರ್ಣ ವಿವರ ನೀಡುವುದು) | • ನಿರ್ಮಿಸಿರುವ ಒಟ್ಟು ಮಳಿಗೆಗಳು - 772<br>• ಹಂಚಿಕೆ ಮಾಡಿರುವ ಮಳಿಗೆಗಳು - 408<br>• ಖಾಲಿ ಇರುವ ಮಳಿಗೆಗಳು - 364<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 6(2)ರಡಿ ದಾಸನಪುರ ಉಪ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣ ವೆಂದು ಅಧಿಸೂಚನೆ ಮೂಲಕ ದಿ:07/10/2009 ರಂದು ಘೋಷಿಸಿ, ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೆ ಒಳಪಡಿಸಲಾಗಿದೆ. ತದನಂತರ, ಅಧಿಸೂಚನೆ ಮೂಲಕ ದಿನಾಂಕ:28-09-2013 ರಲ್ಲಿ 89 ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೊಳಪಡಿಸಲಾಗಿರುತ್ತದೆ.<br><br>ಪ್ರಸ್ತುತ ದಿನಾಂಕ:27.02.2023ರ ಅಧಿಸೂಚನೆಯಲ್ಲಿ ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿನ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಧಿಸೂಚಿಸಲ್ಪಟ್ಟಿರುವ ಕೃಷಿ ಉತ್ಪನ್ನಗಳಲ್ಲಿ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ ಹಾಗೂ ಶುಂಠಿ ಕೃಷಿ ಉತ್ಪನ್ನಗಳನ್ನು ಮಾತ್ರ ಮಾರಾಟ ನಿಯಂತ್ರಣ ಕಕ್ಷೆಯಿಂದ ಅಪವರ್ಜಿಸಿ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಎ, ಬಿ, ಸಿ ಹಾಗೂ ಡಿ ಬ್ಲಾಕ್‌ಗಳಲ್ಲಿ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ/ಶುಂಠಿ ಉತ್ಪನ್ನ ಗಳನ್ನು ಮಾತ್ರ ಮಾರಾಟ ನಿಯಂತ್ರಣಕ್ಕೆ ಒಳಪಡಿಸಲಾಗಿದೆ. |
| ಈ | ಯಶವಂತಪುರ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ, ಶುಂಠಿ ವ್ಯಾಪಾರವನ್ನು ಸಂಪೂರ್ಣವಾಗಿ ದಾಸನಪುರ ಉಪ ಮಾರುಕಟ್ಟೆಗೆ ಸ್ಥಳಾಂತರಿಸಲು ವ್ಯಾಪಾರಸ್ಥರು ಹಲವಾರು ಬಾರಿ ಪ್ರತಿಭಟನೆಗಳನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವರ ಬೇಡಿಕೆಗಳೇನು: ಆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಹೌದು<br><br>ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮಳಿಗೆಗಳನ್ನು ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಪಡೆದಿರುವ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ ವ್ಯಾಪಾರಸ್ಥರು ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಮನ್ನಾ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.<br><br>ಮಾರುಕಟ್ಟೆ ಸಮಿತಿಗಳ ಆದಾಯಗಳಲ್ಲಿ ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕವು ಪ್ರಮುಖ ಆದಾಯವಾಗಿದ್ದು, ಮಾರುಕಟ್ಟೆ ಪ್ರಾಂಗಣಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲವಾದ ಕಾರಣ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ.ಬಿ ಬ್ಲಾಕ್‌ಗಳಲ್ಲಿ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಮಳಿಗೆಗಳನ್ನು ಹಂಚಿಕೆ ಪಡೆದಿರುವ ವರ್ತಕರುಗಳಿಗೆ ನಿಗಧಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕಕ್ಕೆ ಪ್ರತಿ 11ತಿಂಗಳಿಗೆ ಶೇ.25 ರಂತೆ ಹೆಚ್ಚಳ ಮಾಡಿರುವುದನ್ನು ಮಾರ್ಪಡಿಸಿ, ಶೇ.50ರ ದರದಲ್ಲಿ ನಿಗಧಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕದ ದರಗಳಿಗೆ ಹಂಚಿಕೆ ಮಾಡಿದ ದಿನಾಂಕದಿಂದ ಪೂರ್ವಾನ್ವಯವಾಗಿ ಅನ್ವಯಿಸುವಂತೆ ನಿಯಮ 16(4)ರ ಪ್ರಕಾರ 33 ತಿಂಗಳಿಗೊಮ್ಮೆ ಶೇ.5ರಷ್ಟು ಲೀವ್ ಅಂಡ್ ಲೈಸನ್ಸ್ ಶುಲ್ಕ ದರವನ್ನು ಹೆಚ್ಚಿಸಿ, ಬಾಕಿ ಇರುವ ಲೀವ್ ಅಂಡ್ ಲೈಸನ್ಸ್ ಶುಲ್ಕಕ್ಕೆ ಒಂದು ಬಾರಿ ಅನ್ವಯವಾಗುವಂತೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು-2022ರ ನಿಯಮ 7(4)ರಲ್ಲಿರುವ ಅವಕಾಶದನ್ವಯ ದಂಡದಿಂದ ವಿನಾಯಿತಿ ನೀಡಲಾಗಿದೆ. |

...4

| | | |
|---|---|---|
| | | ಯಶವಂತಪುರ ಪ್ರಾಂಗಣದಲ್ಲಿ ಅಧಿಸೂಚಿಸಲ್ಪಟ್ಟ ಈರುಳ್ಳಿ/ಬೆಳ್ಳುಳ್ಳಿ/ ಆಲೂಗಡ್ಡೆ/ಶುಂಠಿ ಉತ್ಪನ್ನಗಳನ್ನು ಅಪವರ್ಜಿಸಲು ಉದ್ದೇಶಿಸಿರುವ ಬಗ್ಗೆ ದಿನಾಂಕ:21.01.2023 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು, ಇದರ ಜೊತೆಗೆ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಪೇಟೆ ಕಾರ್ಯಕರ್ತರಿಗೆ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸಲು ಅನುಕೂಲವಾಗುವಂತೆ ಮಳಿಗೆಗಳನ್ನು ಹಂಚಿಕೆ ಮಾಡಲು ದಿನಾಂಕ:02-02-2023 ರಂದು ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಪ್ರಕಟಣೆಯ ವಿರುದ್ಧ ಕೆಲವು ವರ್ತಕರು ದಿನಾಂಕ:21.01.2023 ರಂದು ಹೊರಡಿಸಲಾದ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ನೀಡಿರುವ ಕಾಲಾವಕಾಶದ ಅವಧಿಯಲ್ಲಿಯೇ ಹಂಚಿಕೆ ಪ್ರಕಟಣೆ ಹೊರಡಿಸಿರುವುದಕ್ಕೆ ಹಾಗೂ ಯಶವಂತಪುರದಿಂದ ದಾಸನಪುರ ಉಪ ಮಾರುಕಟ್ಟೆಗೆ ಈರುಳ್ಳಿ/ಬೆಳ್ಳುಳ್ಳಿ/ ಆಲೂಗಡ್ಡೆ/ಶುಂಠಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸುವ ಆದೇಶಗಳ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿ.ಪಿ.ಸಂ:3221/2023 ಹಾಗೂ 4123/2023 ನ್ನು ದಾಖಲಿಸಿರುತ್ತಾರೆ. ಮಳಿಗೆ ಹಂಚಿಕೆ ಪ್ರಕಟಣೆಯ ವಿರುದ್ಧ ದಾಖಲಿಸಿದ್ದ ಪ್ರಕರಣಗಳಿಗೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:09.02.2023 ರಂದು ತಡೆಯಾಜ್ಞೆ ನೀಡಿದ್ದರಿಂದ ಹಾಗೂ ದಿನಾಂಕ:27.02.2023 ರ ಅಂತಿಮ ಅಧಿಸೂಚನೆಯ ಅಂಶಗಳನ್ನು ಪರಿಗಣಿಸಿ ಹಂಚಿಕೆ ಪ್ರಕ್ರಿಯೆಯನ್ನು ಕೈಗೊಳ್ಳಲು ತೀರ್ಮಾನಿಸಿ ದಿನಾಂಕ:28-02-20223 ರಂದು ಹಂಚಿಕೆ ಪ್ರಕಟಣೆಯನ್ನು ರದ್ದುಪಡಿಸಲಾಗಿರುತ್ತದೆ.<br><br>ದಿನಾಂಕ:24-02-2023 ರಂದು ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈರುಳ್ಳಿ/ಆಲೂಗಡ್ಡೆ/ಬೆಳ್ಳುಳ್ಳಿ/ ಆಲೂಗಡ್ಡೆ, ಶುಂಠಿ ಉತ್ಪನ್ನಗಳನ್ನು ನಿಯಂತ್ರಣ ಕಕ್ಷೆಯಿಂದ ಕೈಬಿಡಲು ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಈರುಳ್ಳು/ಆಲೂಗಡ್ಡೆ/ ಬೆಳ್ಳುಳ್ಳಿ/ಶುಂಠಿ ಉತ್ಪನ್ನಗಳನ್ನು ಮಾತ್ರ ನಿಯಂತ್ರಣ ಕಕ್ಷೆಗೆ ಒಳಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಿರುವ ಆದೇಶದ ವಿರುದ್ಧ ವಿವಿಧ ಸಂಘ ಹಾಗೂ ವರ್ತಕರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿ.ಪಿ.ಸಂ:3221/2023, 4123/2023, 4124/2023, 4132/2023, 5007/2023, 5452/2023 ಮತ್ತು 5455/2023 ರ ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳು ಅಂತಿಮ ವಿಚಾರಣೆಗೆ ಬಾಕಿ ಇದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದು . |

ಸಂಖ್ಯೆ: ಸಿಒ 125 ಎಂಆರ್ಇ 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು